ಸಂ. ಯುಡಿಪಿ/ಇಎಕ್ಸ್‌ಇ/ಇಎಸ್‌ಟಿ/ಎಪಿಟಿ/ವಾಚಾ/58/2014-15 ಜಿಲ್ಲಾಧಿಕಾರಿಯವರ ಕಛೇರಿ,
ಉಡುಪಿ ಜಿಲ್ಲೆ, ಉಡುಪಿ ದಿನಾಂಕ: 24-01-2015.

# : : ಅಧಿಸೂಚನೆ : :

ವಿಷಯ : ಉಡುಪಿ ಜಿಲ್ಲೆಯ ಅಬಕಾರಿ ಇಲಾಖೆಯಲ್ಲಿ ಖಾಲಿ ಇರುವ 04 ವಾಹನ ಚಾಲಕರ (ಗ್ರೂಪ್-'ಸಿ') ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಲು ಅರ್ಜಿ ಆಹ್ವಾನ.

ಉಲ್ಲೇಖ : 1. ಸರ್ಕಾರದ ಆದೇಶ ಸಂ:ಆಇ/107/ಇಪಿಎಸ್/2014, ದಿ:27-10-2014
2. ಅಬಕಾರಿ ಆಯುಕ್ತರು, ಕರ್ನಾಟಕ ರಾಜ್ಯ, ಬೆಂಗಳೂರುರವರ ಪತ್ರ ಸಂ:ಇಸಿಇ/11/ವಾಚಾ/ಎಪಿಟಿ/2013, ದಿ:17-11-2014

★~★★~★★~★

1. ಹುದ್ದೆಗಳ ವರ್ಗೀಕರಣ : 1) ಸಾಮಾನ್ಯ ಅಭ್ಯರ್ಥಿ-2 ಇದರಲ್ಲಿ ಮಹಿಳೆ-1, 2) ಪರಿಶಿಷ್ಟ ಪಂಗಡ-1, 3) ಪ್ರವರ್ಗ-1 - 1
2. ವಯೋಮಿತಿ: ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ 18 ರಿಂದ 35 ವರ್ಷಗಳು, ಪರಿಶಿಷ್ಟ ಪಂಗಡ/ಪ್ರವರ್ಗ-1 ರ ಅಭ್ಯರ್ಥಿಗಳಿಗೆ 18 ರಿಂದ 40 ವರ್ಷಗಳು.
3. ವಿದ್ಯಾರ್ಹತೆ: ೭ ನೇ ತರಗತಿಯಲ್ಲಿ ಉತ್ತೀರ್ಣವಾಗಿರಬೇಕು. ಆದಾಗ್ಯೂ ೭ ನೇ ತರಗತಿಗಿಂತ ಹೆಚ್ಚಿನ ವಿದ್ಯಾರ್ಹತೆ ಹೊಂದಿದವರಿಗೆ ಆದ್ಯತೆ ನೀಡಲಾಗುವುದು.
4. ಅರ್ಹತೆ: ಚಾಲ್ತಿಯಲ್ಲಿರುವ 4 ಚಕ್ರ ಮೋಟಾರು ವಾಹನದ ಡ್ರೈವಿಂಗ್ ಲೈಸೆನ್ಸ್ (LMV) ಹೊಂದಿರತಕ್ಕದ್ದು.
5. ದೇಹದಾರ್ಢ್ಯತೆ (Physical Standard/Fitness)

| ಕ್ರ.ಸಂ. | ಪುರುಷರಿಗೆ | | ಮಹಿಳೆಯರಿಗೆ |
|---|---|---|---|
| 1. | ಎತ್ತರ-163 ಸೆಂ.ಮೀ. | | ಎತ್ತರ - 157 ಸೆಂ.ಮೀ. |
| 2. | ಎದೆಯ ಸುತ್ತಳತೆ | | ತೂಕ- 49.9 ಕೆ.ಜಿ. |
| | ನಿಶ್ವಾಸ ಸ್ಥಿತಿಯಲ್ಲಿ | ಉಚ್ವಾಸ ಸ್ಥಿತಿಯಲ್ಲಿ ವಿಸ್ತರಣೆ | |
| | 81 ಸೆಂ,ಮೀ. ಗಿಂತ ಕಡಿಮೆ ಇರಬಾರದು | 5 ಸೆಂ.ಮೀ. ಗಿಂತ ಹೆಚ್ಚಳ ವಾಗಬೇಕು | |
| 3. | ದೃಷ್ಟಿ ಸಾಮರ್ಥ್ಯ-6/9 ಅಥವಾ 6/12 | | ದೃಷ್ಟಿ ಸಾಮರ್ಥ್ಯ-6/9 ಅಥವಾ 6/12 |

6. ಪ್ರಥಮ ಚಿಕಿತ್ಸೆಯ ದೃಢಪತ್ರ ಹೊಂದಿರತಕ್ಕದ್ದು. (First Aid Certificate)
7. ವೇತನ ಶ್ರೇಣಿ: ರೂ.11600-200-12000-250-13000-300-14200-350-15600-400-17200-450-19000-500-21000
8. ನಿಗದಿತ ಅರ್ಜಿ ಶುಲ್ಕ : ಅರ್ಜಿ ಶುಲ್ಕ ರೂ.5/- ನ್ನು ಕ್ರಾಸ್ಡ್ ಇಂಡಿಯನ್ ಪೋಸ್ಟಲ್ ಆರ್ಡರ್‌ನ್ನು ವಾಹನ ಚಾಲಕ ಆಯ್ಕೆ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಸ್ ಕಛೇರಿ, ಉಡುಪಿ ಜಿಲ್ಲೆ, ಉಡುಪಿರವರ ಹೆಸರಿನಲ್ಲಿ ಪಡೆಯತಕ್ಕದು. (ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1 ರ ಅಭ್ಯರ್ಥಿಗಳಿಗೆ ಯಾವುದೇ ಶುಲ್ಕವಿರುವುದಿಲ್ಲ)
9. ಅರ್ಜಿಯನ್ನು ಸಲ್ಲಿಸುವ ವಿಧಾನ ಮತ್ತು ಕೊನೆಯ ದಿನಾಂಕ: ಅರ್ಜಿಯ ನಮೂನೆಯನ್ನು ವೆಬ್‌ಸೈಟ್ **www.udupi.nic.in** ನಿಂದ ಪಡೆದು ದಿನಾಂಕ:24-02-2015 ರಂದು ಸಾಯಂಕಾಲ 5-30 ಗಂಟೆಯ ಒಳಗೆ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಸ್ ಕಛೇರಿ, ಅಬಕಾರಿ ಭವನ, 1ನೇ ಮಹಡಿ, ಅಜ್ಜರಕಾಡು, ಉಡುಪಿ ಜಿಲ್ಲೆ, ಉಡುಪಿ ಕಛೇರಿಗೆ ಸಲ್ಲಿಸತಕ್ಕದ್ದು. ನಿಗಧಿತ ಕೊನೆಯ ದಿನಾಂಕ ಮತ್ತು ಸಮಯ ನಂತರ ಬರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಹೆಚ್ಚಿನ ವಿವರಗಳಿಗಾಗಿ **www.udupi.nic.in** ನಲ್ಲಿ ಪಡೆಯತಕ್ಕದ್ದು.

R. [signature]

ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ, ಉಡುಪಿ
ಹಾಗೂ ವಾಹನ ಚಾಲಕರ ನೇಮಕಾತಿ
ಸಮಿತಿಯ ಅಧ್ಯಕ್ಷರು

ರಾಜ್ಯ ಅಬಕಾರಿ ಇಲಾಖೆ
ಅಬಕಾರಿ ಭವನ. ಉಡುಪಿ ಜಿಲ್ಲೆ, ಉಡುಪಿ

ಸಂ. ಯುಡಿಪಿ/ಇಎಕ್ಸ್‌ಇ/ಇಎಸ್‌ಟಿ/ಎಪಿಟಿ/ವಾಚಾ/58/2014-15

ಜಿಲ್ಲಾಧಿಕಾರಿಯವರ ಕಛೇರಿ
ಉಡುಪಿ ಜಿಲ್ಲೆ, ಉಡುಪಿ ದಿನಾಂಕ: 24-01-2015.

# ಜಾಹೀರಾತು

ರಾಜ್ಯ ಅಬಕಾರಿ ಇಲಾಖೆ, ಉಡುಪಿ ಜಿಲ್ಲೆ ಇಲ್ಲಿ ಖಾಲಿ ಇರುವ ಗ್ರೂಪ್-'ಸಿ' ವೃಂದದ 04 ವಾಹನ ಚಾಲಕ ಹುದ್ದೆಗಳನ್ನು ಇಲಾಖೆಯ ಪದವೃಂದ ಮತ್ತು ನೇಮಕಾತಿ ನಿಯಮಾವಳಿ ಹಾಗೂ ತದನಂತರದ ತಿದ್ದುಪಡಿ ಆದೇಶಗಳನುಸಾರ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ನೇರವಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹುದ್ದೆಗಳ ಮೀಸಲಾತಿ ವರ್ಗೀಕರಣ ಈ ಕೆಳಕಾಣಿಸಿದಂತಿರುತ್ತದೆ.

| | | | |
|---|---|---|---|
| 1. | ಸಾಮಾನ್ಯ ಅಭ್ಯರ್ಥಿ | 2 | ಇದರಲ್ಲಿ ಮಹಿಳೆ – 1 |
| 2. | ಪರಿಶಿಷ್ಟ ಪಂಗಡ | 1 | |
| 3. | ಪ್ರವರ್ಗ-1 | 1 | |
| | ಒಟ್ಟು | 4 | |

<u>ಸೂಚನೆ :-</u> ಮಹಿಳಾ ಮೀಸಲಾತಿಯ ರಿಕ್ತ ಸ್ಥಾನದಲ್ಲಿ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಆ ವರ್ಗಕ್ಕೆ ಸೇರಿದ ಅರ್ಹ ಪುರುಷ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

1) <u>ವಿದ್ಯಾರ್ಹತೆ:</u> 7 ನೇ ತರಗತಿಯನ್ನು ಉತ್ತೀರ್ಣವಾಗಿರಬೇಕು.

2) <u>ಚಾಲ್ತಿಯಲ್ಲಿರುವ 4 ಚಕ್ರ ಮೋಟಾರು ವಾಹನದ ಡ್ರೈವಿಂಗ್ ಲೈಸೆನ್ಸ್ (LMV) ಹೊಂದಿರತಕ್ಕದ್ದು.</u>

3) <u>ಪ್ರಥಮ ಚಿಕಿತ್ಸೆಯ ದೃಢಪತ್ರ ಹೊಂದಿರತಕ್ಕದ್ದು. (First Aid Certificate)</u>

4) <u>ವಯೋಮಿತಿ :-</u>

ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕಕ್ಕೆ ಅನುಗುಣವಾಗಿರುವಂತೆ ಈ ಕೆಳಗಿನಂತೆ ವಯೋಮಿತಿ ಹೊಂದಿರತಕ್ಕದ್ದು.

| ವರ್ಗ | ಕನಿಷ್ಠ ವಯೋಮಿತಿ | ಗರಿಷ್ಠ ವಯೋಮಿತಿ |
|---|---|---|
| ಸಾಮಾನ್ಯ ವರ್ಗ | 18 ವರ್ಷ | 35 ವರ್ಷ |
| ಪ.ಪಂಗಡ/ಪ್ರವರ್ಗ-1 | 18 ವರ್ಷ | 40 ವರ್ಷ |

5) <u>ದೇಹದಾರ್ಢ್ಯತೆ :-</u>

ಅಭ್ಯರ್ಥಿಗಳು ಈ ಕೆಳಕಂಡ ಕನಿಷ್ಠ ದೇಹದಾರ್ಢ್ಯತೆ ಹೊಂದಿರಬೇಕು.

<table>
<tr><th>ಕ್ರ.ಸಂ.</th><th colspan="2">ಪುರುಷರಿಗೆ</th><th>ಮಹಿಳೆಯರಿಗೆ</th></tr>
<tr><td>1.</td><td colspan="2">ಎತ್ತರ-163 ಸೆಂ.ಮೀ.</td><td>ಎತ್ತರ – 157 ಸೆಂ.ಮೀ.</td></tr>
<tr><td rowspan="3">2.</td><td colspan="2">ಎದೆಯ ಸುತ್ತಳತೆ</td><td rowspan="3">ತೂಕ- 49.9 ಕೆ.ಜಿ.</td></tr>
<tr><td>ನಿಶ್ವಾಸ ಸ್ಥಿತಿಯಲ್ಲಿ</td><td>ಉಚ್ವಾಸ ಸ್ಥಿತಿಯಲ್ಲಿ ವಿಸ್ತರಣೆ</td></tr>
<tr><td>81 ಸೆಂ.ಮೀ. ಗಿಂತ ಕಡಿಮೆ ಇರಬಾರದು</td><td>5 ಸೆಂ.ಮೀ. ಗಿಂತ ಹೆಚ್ಚಾಗಿರಬೇಕು</td></tr>
<tr><td>3.</td><td colspan="2">ದೃಷ್ಟಿ ಸಾಮರ್ಥ್ಯ-6/9 ಅಥವಾ 6/12</td><td>ದೃಷ್ಟಿ ಸಾಮರ್ಥ್ಯ-6/9 ಅಥವಾ 6/12</td></tr>
</table>

6) <u>ಜಾತಿ :-</u> ಮೀಸಲಾತಿ ಕೋರ ಬಯಸುವ ಅಭ್ಯರ್ಥಿಗಳು ನಿಗಧಿತ ನಮೂನೆಯಲ್ಲಿ ಚಾಲ್ತಿಯಲ್ಲಿರುವ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕು.

ಅ. ಗ್ರಾಮೀಣ ಅಭ್ಯರ್ಥಿ, ಅಂಗವಿಕಲ, ಮಾಜಿಸೈನಿಕ, ಯೋಜನೆಗಳಿಂದ ನಿರಾಶ್ರಿತ, ಕನ್ನಡ ಮಾಧ್ಯಮ ಅಭ್ಯರ್ಥಿಗಳಿಗೆಂದೇ ನಿಗದಿಪಡಿಸಿದ ಪ್ರತ್ಯೇಕ ಮೀಸಲಾತಿ ಇರುವುದಿಲ್ಲ.

7) ಅರ್ಜಿಯನ್ನು ಸಲ್ಲಿಸುವ ವಿಧಾನ ಮತ್ತು ಕೊನೆಯ ದಿನಾಂಕ :-

A. ಅರ್ಜಿ ಶುಲ್ಕ ರೂ.5/- ರ ಕ್ರಾಸ್ಡ್ ಇಂಡಿಯನ್ ಪೋಸ್ಟಲ್ ಆರ್ಡರ್‌ನ್ನು ವಾಹನ ಚಾಲಕ ಆಯ್ಕೆ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಸ್, ಉಡುಪಿ ಜಿಲ್ಲೆ, ಉಡುಪಿರವರ ಹೆಸರಿನಲ್ಲಿ ಪಡೆಯತಕ್ಕದು. (ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1 ರ ಅಭ್ಯರ್ಥಿಗಳಿಗೆ ಯಾವುದೇ ಶುಲ್ಕವಿರುವುದಿಲ್ಲ)

B. ಅರ್ಜಿಯ ನಮೂನೆಯನ್ನು ವೆಬ್‌ಸೈಟ್ **www.udupi.nic.in** ನಲ್ಲಿ ಪ್ರಕಟಿಸಲಾಗಿದೆ. ಅರ್ಜಿ ನಮೂನೆಯನ್ನು ವೆಬ್‌ಸೈಟ್ **www.udupi.nic.in** ನಿಂದ ಡೌನ್‌ಲೋಡ್ ಮಾಡಿಕೊಂಡು ನಿಗದಿತ ಶುಲ್ಕದೊಂದಿಗೆ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಮಾಹಿತಿಗಳನ್ನು ಭರ್ತಿ ಮಾಡಿ ಸಲ್ಲಿಸತಕ್ಕದ್ದು.

C. ಅರ್ಜಿ ಸಲ್ಲಿಸಲು ಕೊನೆಯ ದಿ:24-02-2015 ಆಗಿರುತ್ತದೆ. ತದನಂತರ ಬರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

D. ಅಭ್ಯರ್ಥಿಗಳು ಸದರಿ ಅದಿಸೂಚನೆ ಅಡಿಯಲ್ಲಿ ಪ್ರಕಟಿಸಲಾದ ಹುದ್ದೆಗೆ ಒಂದು ಬಾರಿ ಮಾತ್ರ ಅರ್ಜಿಯನ್ನು ಸಲ್ಲಿಸಬಹುದಾಗಿದ್ದು, ಒಮ್ಮೆ ಸಲ್ಲಿಸಿದ ಅರ್ಜಿಯನ್ನು ಯಾವುದೇ ಕಾರಣಕ್ಕಾಗಿ ತಿದ್ದುಪಡಿ ಮಾಡಲು ಅವಕಾಶವಿರುವುದಿಲ್ಲ.

8) ಆಯ್ಕೆ ವಿಧಾನ :-

A. ಪೂರ್ಣ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಿದ ಅರ್ಹ ಅಭ್ಯರ್ಥಿಗಳಿಗೆ ಸಂದರ್ಶನದ ದಿನಾಂಕವನ್ನು ನೋಂದಣಿ ಅಂಚೆ ಮೂಲಕ ತಿಳಿಸಲಾಗುವುದು. ಸಂದರ್ಶನ ದಿನಾಂಕದಂದು ಅಭ್ಯರ್ಥಿಗಳು ಎಲ್ಲಾ ಮೂಲ ದಾಖಲಾತಿಗಳೊಂದಿಗೆ ಸಂದರ್ಶಕ್ಕೆ ನಿಗಧಿತ ದಿನಾಂಕ ಮತ್ತು ಸಮಯಕ್ಕೆ ಹಾಜರಾಗುವುದು.

B. ಸಮರ್ಪಕವಾಗಿ ದಾಖಲಾತಿಗಳನ್ನು ಸಲ್ಲಿಸಿದ ಅಭ್ಯರ್ಥಿಗಳನ್ನು ಜಿಲ್ಲಾ ಶಸ್ತ್ರ ಚಿಕಿತ್ಸಕರು, ಉಡುಪಿ ಜಿಲ್ಲೆ, ಇವರ ಮೂಲಕ ದೇಹದಾರ್ಢ್ಯತೆ (Physical Standard/Fitness) ಪರೀಕ್ಷೆಯನ್ನು ನಡೆಸಲಾಗುವುದು.

C. ಸಾರಿಗೆ ಇಲಾಖೆಯ ಅಧಿಕಾರಿಯ ಸಮಕ್ಷಮದಲ್ಲಿ ಈ ಕೆಳಕಂಡ ಅಂಶಗಳ ಬಗ್ಗೆ ಸಂದರ್ಶನ ನಡೆಸಲಾಗುವುದು :-

| | | |
|---|---|---|
| i. | ಅಭ್ಯರ್ಥಿಗಳ ವಾಹನ ಚಾಲನಾ ಪರೀಕ್ಷೆ ನಡೆಸುವುದು. | ತೃಪ್ತಿಕರ/ಅತೃಪ್ತಿಕರ |
| ii. | ಮೈಲೇಜ್ ಲೆಕ್ಕಾಚಾರದ ಬಗ್ಗೆ. | ತೃಪ್ತಿಕರ/ಅತೃಪ್ತಿಕರ |
| iii. | ವಾಹನದ ಬಿಡಿಭಾಗಗಳನ್ನು ಮತ್ತು ಅವುಗಳು ಮಾಡುವ ಕಾರ್ಯವನ್ನು ಗುರುತಿಸುವ ಬಗ್ಗೆ. | ತೃಪ್ತಿಕರ/ಅತೃಪ್ತಿಕರ |
| iv. | ವಾಹನದ ಚಕ್ರವನ್ನು ಹಾಗೂ ಇತರೆ ಬಿಡಿಭಾಗಗಳನ್ನು ಬದಲಾಯಿಸುವ ಕಾಲಾವಧಿ ಬಗ್ಗೆ. | ತೃಪ್ತಿಕರ/ಅತೃಪ್ತಿಕರ |

D. ಮೇಲ್ಕಾಣಿಸಿದ ಎಲ್ಲಾ ಹಂತಗಳಲ್ಲಿ ಯಶಸ್ವಿಯಾಗಿರುವ ಅಭ್ಯರ್ಥಿಗಳನ್ನು 1 : 3 ಪ್ರಮಾಣದಲ್ಲಿ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ದಾಖಲಿಸಲಾಗುವುದು. ಈ ಪ್ರಕ್ರಿಯೆಯಲ್ಲಿ 7 ನೇ ತರಗತಿಯಲ್ಲಿ ಪಡೆದ ಅಂಕಗಳನ್ನು ಮಾನದಂಡವಾಗಿ ಪರಿಗಣಿಸಲಾಗುವುದು.

E. ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳನ್ನು ಪೋಲೀಸ್ ಚಾಲನಾ ತರಬೇತಿ ಮತ್ತು ನಿರ್ವಹಣಾ ಶಾಲೆ, ಬೆಂಗಳೂರು (Police Driving and Maintenance School, Bangalore) ಇಲ್ಲಿಗೆ ಪ್ರಮಾಣ ಪತ್ರ ಪಡೆಯಲು ನಿಯೋಜಿಸಲಾಗುವುದು.

F. ಈ ರೀತಿ ನಿಯೋಜಿಸಲಾದ ಅಭ್ಯರ್ಥಿಗಳ ಪೈಕಿ ಸದರಿ ಶಾಲೆಯಿಂದ "ತೃಪ್ತಿಕರ" ಎಂಬ ಪ್ರಮಾಣಪತ್ರ ಪಡೆದ ಅಭ್ಯರ್ಥಿಗಳ ಪೈಕಿ 7 ನೇ ತರಗತಿಯಲ್ಲಿ ಗರಿಷ್ಟ ಅಂಕಗಳನ್ನು ಪಡೆದ ಅರ್ಹ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದು.

ಈ ಪ್ರಕ್ರಿಯೆಯ ನಂತರವೂ ಅರ್ಹ ಅಭ್ಯರ್ಥಿಗಳ ಕೊರತೆ ಇದ್ದಲ್ಲಿ ಮುಂದಿನ ಅಭ್ಯರ್ಥಿಗಳನ್ನೊಳಗೊಂಡ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಬಿಡುಗಡೆಮಾಡಿ ಮೇಲಿನಂತೆ ಪ್ರಕ್ರಿಯೆ ಮುಂದುವರೆಸಲಾಗುವುದು.

**ಮೇಲ್ಕಾಣಿಸಿದ ಯಾವುದೇ ಸಂದರ್ಭದಲ್ಲಿ ಅಭ್ಯರ್ಥಿಗಳು ಯಾವುದೇ ಮಧ್ಯವರ್ತಿಗಳ ಆಮಿಷಕ್ಕೆ ಒಳಗಾಗಬಾರದು.**

9) ಹುದ್ದೆಯ ವೇತನ ಶ್ರೇಣಿ ಈ ಕೆಳಗಿನಂತಿರುತ್ತದೆ :-

| ಹುದ್ದೆ | ವೇತನ ಶ್ರೇಣಿ |
|---|---|
| ವಾಹನ ಚಾಲಕ | ರೂ.11600-200-12000-250-13000-300-14200-350-15600-400-17200-450-19000-500-21000 |

A. ಆಯ್ಕೆಗೊಂಡು ನೇಮಕಾತಿ ಹೊಂದಿದ ಅಭ್ಯರ್ಥಿಗಳನ್ನು ಎರಡು ವರ್ಷಗಳ ಅವಧಿಯವರೆಗೆ ಪರೀಕ್ಷಾರ್ಥ ಅವಧಿಯಲ್ಲಿಡಲಾಗುವುದು.

B. ದಾಖಲಾತಿಗಳ ಪರಿಶೀಲನೆ, ದೇಹದಾರ್ಢ್ಯತೆ ಪರೀಕ್ಷೆ/ಪೋಲೀಸ್ ಚಾಲನಾ ಮತ್ತು ನಿರ್ವಹಣೆ ವೃತ್ತಿ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಯಾವುದೇ ತರಹದ ಗೌರವ ಧನ ನೀಡಲಾಗುವುದಿಲ್ಲ. ಹಾಗೂ ಇದಕ್ಕೆ ಯಾವುದಾದರು ನಿಗಧಿತ ಶುಲ್ಕವಿದ್ದಲ್ಲಿ ಅಭ್ಯರ್ಥಿಗಳು ಸ್ವತಃ ಭರಿಸತಕ್ಕದ್ದು.

10) <u>ಅಭ್ಯರ್ಥಿಗಳು ಅರ್ಜಿಯೊಂದಿಗೆ ಈ ಕೆಳಕಂಡ ದಾಖಲಾತಿಗಳ ಪ್ರತಿಗಳನ್ನು ಪತ್ರಾಂಕಿತ ಅಧಿಕಾರಿಗಳಿಂದ ದೃಡೀಕರಿಸಿ ಸಲ್ಲಿಸತಕ್ಕದ್ದು :-</u>

A. 7 ನೇ ತರಗತಿ ವಿದ್ಯಾರ್ಹತೆಯ ಪ್ರಮಾಣ ಪತ್ರ.

B. ಚಾಲ್ತಿಯಲ್ಲಿರುವ ಲಘು ಮೋಟಾರ್ ವಾಹನ ಪರವಾನಿಗೆ ಪತ್ರ.

C. ಜನ್ಮ ದಿನಾಂಕವನ್ನು ದೃಡೀಕರಿಸುವ ಎಸ್.ಎಸ್.ಎಲ್.ಸಿ ಪ್ರಮಾಣ ಪತ್ರ ಅಥವಾ ವರ್ಗಾವಣೆ ಪ್ರಮಾಣ ಪತ್ರ (T.C.) ಕ್ಯುಮುಲೇಟಿವ್ ರೆಕಾರ್ಡ್.

D. ಜಾತಿ ಪ್ರಮಾಣ ಪತ್ರ.

E. ಪ್ರಥಮ ಚಿಕಿತ್ಸೆಯ ದೃಡಪತ್ರ ಹೊಂದಿರತಕ್ಕದ್ದು. (First Aid Certificate)

F. ಸ್ಥಳೀಯ ಇಬ್ಬರು ಗಣ್ಯರಿಂದ ಪಡೆದ ನಡತೆ ಪ್ರಮಾಣ ಪತ್ರಗಳು.

G. ದೇಹದಾರ್ಢ್ಯತೆ (Physical Standard/Fitness) ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರ.
(ಇದನ್ನು ಅಸಿಸ್ಟೆಂಟ್ ಸರ್ಜನ್ (ಗ್ರೇಡ್ ನಂ-1) ಇದಕ್ಕಿಂತ ಕಡಿಮೆ ದರ್ಜೆಯ ಅಧಿಕಾರಿಗಳು ನೀಡಿರಬಾರದು. ದೃಡೀಕೃತ ಪ್ರತಿ ಲಗತ್ತಿಸತಕ್ಕದ್ದು)

**<u>ಅಭ್ಯರ್ಥಿಗಳು ಅರ್ಜಿಯಲ್ಲಿ ನಮೂದಿಸಿರುವಂತೆ ಅರ್ಹತೆ ಹಾಗೂ ಮೀಸಲಾತಿಗೆ ಅನುಗುಣವಾಗಿ ಮೇಲ್ಕಾಣಿಸಿದ ಮೂಲ ದಾಖಲಾತಿಗಳ ಪ್ರಮಾಣ ಪತ್ರಗಳನ್ನು ಹೊಂದಿರಬೇಕು. ಹಾಗೂ ಇಲಾಖೆಯು ಮೂಲ ದಾಖಲಾತಿಗಳನ್ನು ಪರಿಶೀಲನೆಗಾಗಿ ಸೂಚಿಸಿದಾಗ ಮಾತ್ರ ಹಾಜರುಪಡಿಸತಕ್ಕದ್ದು.</u>**

11) <u>ಅಭ್ಯರ್ಥಿಗಳು ಈ ಕೆಳಕಾಣಿಸಿದ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು :-</u>

A. ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿ ಮಾಡುವ ಮುನ್ನ ಲಭ್ಯವಿರುವ ಸೂಚನೆಗಳನ್ನು ತಪ್ಪದೇ ಗಮನಿಸತಕ್ಕದ್ದು.

B. ಒಬ್ಬ ಅಭ್ಯರ್ಥಿಯು ಒಂದು ಹುದ್ದೆಗೆ ಒಂದು ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ. ಒಂದಕ್ಕಿಂತ ಹೆಚ್ಚು ಅರ್ಜಿಗಳು ಸಲ್ಲಿಸಿದಲ್ಲಿ ಮೊದಲು ಸಲ್ಲಿಸಿರುವ ಅರ್ಜಿಯನ್ನು ಮಾತ್ರ ಪರಿಗಣಿಸಿ ಒಂದು ಬಾರಿ ಮಾತ್ರ ಚಾಲನಾ ವೃತ್ತಿ ಪರೀಕ್ಷೆಯನ್ನು ನೀಡಲಾಗುವುದು.

C. ಇಲಾಖೆಯ ನೇಮಕಾತಿ ನಿಯಮಾವಳಿಯನುಸಾರ ಅಂಗವಿಕಲರು ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.

D. ಉದ್ಯೋಗ ವಿನಿಮಯ ಕೇಂದ್ರದಲ್ಲಿ ಹೆಸರನ್ನು ನೋಂದಾಯಿಸಿದ ಅರ್ಹ ಅಭ್ಯರ್ಥಿಗಳು ಸಹ ಈ ಜಾಹೀರಾತಿನ ಅನುಸಾರ ಅರ್ಜಿ ಸಲ್ಲಿಸಬಹುದಾಗಿದೆ.

E. ಅಭ್ಯರ್ಥಿಯು ಅರ್ಜಿಯನ್ನು ಸಮರ್ಪಕವಾಗಿ ಭರ್ತಿ ಮಾಡದೇ ಅರ್ಜಿಯು ತಿರಸ್ಕೃತವಾದಲ್ಲಿ ಅಥವಾ ಯಾವುದೇ ಸೌಲಭ್ಯದಿಂದ ಅವರು ವಂಚಿತರಾದಲ್ಲಿ ಅದಕ್ಕೆ ಅಭ್ಯರ್ಥಿಗಳೇ ನೇರ ಜವಾಬ್ದಾರರು.

F. ಅರ್ಜಿಯಲ್ಲಿ ತಪ್ಪು ಮಾಹಿತಿ ನೀಡಿ ಉದ್ಯೋಗ ಪಡೆಯುವ ಅಭ್ಯರ್ಥಿಗಳನ್ನು ಯಾವುದೇ ಸಮಯದಲ್ಲಾದರೂ ವಜಾ / ತೆಗೆದು ಹಾಕಲಾಗುತ್ತದೆ. ಸುಳ್ಳು ಮಾಹಿತಿ ಅಥವಾ ನಕಲಿ ಪ್ರಮಾಣ ಪತ್ರ /ದಾಖಲಾತಿಗಳನ್ನು ಸಲ್ಲಿಸಿ ನೌಕರಿ ಪಡೆದಿರುವುದು ಯಾವುದೇ ಸಂದರ್ಭದಲ್ಲಿ ಕಂಡುಬಂದಲ್ಲಿ ಅವರನ್ನು ಯಾವುದೇ ಮುನ್ಸೂಚನೆ ನೀಡದೇ ನೌಕರಿಯಿಂದ ವಜಾ ಮಾಡುವುದರ ಜೊತೆಗೆ ಅವರ ವಿರುದ್ಧ ಕಾನೂನು ರೀತಿಯ ಕ್ರಮ ತೆಗೆದುಕೊಳ್ಳಲಾಗುವುದು.

G. ಅರ್ಜಿಯಲ್ಲಿ ನೀಡುವ ವಿಳಾಸವೇ ಅಂತಿಮವಾಗಿದ್ದು ಎಲ್ಲಾ ಪತ್ರ ವ್ಯವಹಾರಗಳನ್ನು ಅದೇ ವಿಳಾಸಕ್ಕೆ ಕಳುಹಿಸಿಕೊಡಲಾಗುವುದು. ನಂತರದಲ್ಲಿ ವಿಳಾಸ ಬದಲಾವಣೆ ಬಗ್ಗೆ ಯಾವುದೇ ಪತ್ರ ವ್ಯವಹಾರವನ್ನು ಪರಿಗಣಿಸಲಾಗುವುದಿಲ್ಲ.

H. ನೈತಿಕ ದುರ್ನಡತೆಯಿಂದಾಗಿ/ ನೀತಿ ಬಾಹಿರ ಚಟುವಟಿಕೆಗಳಿಂದಾಗಿ ನ್ಯಾಯಾಲಯದಿಂದ ಶಿಕ್ಷೆಗೊಳಪಟ್ಟಿರುವ ವ್ಯಕ್ತಿ ಅಥವಾ ಈ ಇಲಾಖೆಯಲ್ಲಿ ಅಥವಾ ರಾಜ್ಯ/ಕೇಂದ್ರ /ಸ್ಥಳೀಯ ಸಂಸ್ಥೆ/ಕೈಗಾರಿಕಾ/ವಾಣಿಜ್ಯಕ್ಕೆ ಸಂಬಂಧಪಟ್ಟ ಅಥವಾ ಇತರೆ ಕಛೇರಿಗಳಲ್ಲಿ ನೈತಿಕ ದುರ್ನಡತೆಯಿಂದಾಗಿ/ನೀತಿ ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗಿ ಅಥವಾ ಆಯ್ಕೆಯಾದ ಅಭ್ಯರ್ಥಿಯು ಬದಲಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಕಾನೂನು ಬಾಹಿರ/ ನೀತಿ ಬಾಹಿರ ಚಟುವಟಿಕೆಗಳಲ್ಲಿ ತೊಡಗಿ ಸೇವೆಯಿಂದ ತೆಗೆದು ಹಾಕಿದ್ದಲ್ಲಿ/ವಜಾ ಮಾಡಲ್ಪಟ್ಟಿದ್ದಲ್ಲಿ ಅಂತಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅನರ್ಹರಾಗಿರುತ್ತಾರೆ/ಅರ್ಜಿ ಸಲ್ಲಿಸಿದಲ್ಲಿ ತಿರಸ್ಕರಿಸಲಾಗುವುದು.

I. ಅಭ್ಯರ್ಥಿಗಳು ಪರಿಶಿಷ್ಟ ಪಂಗಡ/ಪ್ರವರ್ಗ-1, ಸಾಮಾನ್ಯ ವರ್ಗ ಇತ್ಯಾದಿಗಳ ಮೀಸಲಾತಿಗಳನ್ನು ಕೋರುತ್ತಿದ್ದಲ್ಲಿ ಕರ್ನಾಟಕ ಸರ್ಕಾರವು ನಿಗಧಿಪಡಿಸಿರುವ ಅರ್ಹತೆಯನ್ನು (ಕ್ರೈಟೀರಿಯ) ಸರಿಯಾಗಿ ತಿಳಿದುಕೊಂಡು ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕದೊಳಗೆ ಪ್ರಮಾಣ ಪತ್ರಗಳನ್ನು ಹೊಂದಿರತಕ್ಕದ್ದು.

J. ೭ನೇ ತರಗತಿ ಅಥವಾ ಮೇಲ್ದರ್ಜೆಯ ಪರೀಕ್ಷೆಯಲ್ಲಿ ಪ್ರಥಮ ಅಥವಾ ದ್ವಿತೀಯ ಭಾಷೆಯಲ್ಲಿ ಕನ್ನಡವನ್ನು ಅಧ್ಯಯನ ಮಾಡದೇ ಇದ್ದಲ್ಲಿ ಆಯ್ಕೆಗೊಂಡ ಅಭ್ಯರ್ಥಿಗಳು ಕನ್ನಡ ಭಾಷಾ ಜ್ಞಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು

K. **ಅಭ್ಯರ್ಥಿಯು ತನ್ನ ಆಯ್ಕೆಗಾಗಿ ಯಾವುದೇ ವಿಧವಾದ ಪ್ರಭಾವ ಬೀರುವ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಲ್ಲಿ ಅವರನ್ನು ಯಾವ ಮುನ್ಸೂಚನೆ ನೀಡದೇ ಅವರನ್ನು ಅನರ್ಹಗೊಳಿಸಲಾಗುವುದು.**

L. ನೇಮಕಾತಿಯ ವಿವಿಧ ಹಂತಕ್ಕೆ ಸಂಬಂಧಪಟ್ಟ ಎಲ್ಲಾ ವಿವರಗಳನ್ನು ವೆಬ್‌ಸೈಟ್ **<u>www.udupi.nic.in</u>** ನಲ್ಲಿ ಪಡೆಯಬಹುದಾಗಿರುತ್ತದೆ. ಆದ್ದರಿಂದ ನೇಮಕಾತಿ ಪ್ರಕ್ರಿಯೆಗಳ ಬಗ್ಗೆ ಅಭ್ಯರ್ಥಿಗಳು ಯಾವುದೇ ರೀತಿಯ ಪತ್ರ ವ್ಯವಹಾರ ಅಥವಾ ವಿಚಾರಣೆಗಳಿಗೆ ಅಸ್ಪದವಿರುವುದಿಲ್ಲ.

M. ಅಭ್ಯರ್ಥಿಗಳ ಅರ್ಹತೆ ಮತ್ತು ಆಯ್ಕೆಯ ವಿಷಯದಲ್ಲಿ ಇಲಾಖೆಯ ನಿರ್ಧಾರವೇ ಅಂತಿಮವಾಗಿರುತ್ತದೆ.

N. ಅಭ್ಯರ್ಥಿಯು ಸಾರ್ವಜನಿಕ ಉದ್ದಿಮೆ ಅಥವಾ ಕರ್ನಾಟಕ ಸರ್ಕಾರ ಅಥವಾ ಕೇಂದ್ರ ಸರ್ಕಾರದಲ್ಲಿ ಕೆಲಸ ನಿರ್ವಹಿಸುತ್ತಿದ್ದಲ್ಲಿ ಅಂತಹ ಅಭ್ಯರ್ಥಿಯು ಸೂಕ್ತ ಪ್ರಾಧಿಕಾರಸ್ಥರಿಂದ ನಿರಾಕ್ಷೇಪಣಾ ಪತ್ರವನ್ನು ಹಾಜರುಪಡಿಸತಕ್ಕದ್ದು.

O. ತಾತ್ಕಾಲಿಕವಾಗಿ ಆಯ್ಕೆಗೊಂಡ ಅಭ್ಯರ್ಥಿಗಳನ್ನು ಉಡುಪಿ ಜಿಲ್ಲೆಯ ಅಧೀನ ಕಛೇರಿಗಳಲ್ಲಿ ಮಾತ್ರ ತೈನಾತಿಸಲಾಗುವುದು.

P. ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳನ್ನು ಪೊಲೀಸ್ ತರಬೇತಿ ಮತ್ತು ನಿರ್ವಹಣಾ ಶಾಲೆಗೆ ನಿಯೋಜಿಸಲಾಗುವುದು. ಅಭ್ಯರ್ಥಿಯ ಯಶಸ್ವಿ ಚಾಲನಾ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸಿದ ನಂತರವಷ್ಟೆ ಅಭ್ಯರ್ಥಿಗೆ ನೇಮಕಾತಿ ಆದೇಶ ನೀಡಲಾಗುವುದು. ಒಂದು ವೇಳೆ ಅಭ್ಯರ್ಥಿಯು ಪ್ರಮಾಣಪತ್ರವನ್ನು ಪಡೆಯುವಲ್ಲಿ ವಿಫಲವಾದಲ್ಲಿ ಆಯ್ಕೆ ಪಟ್ಟಿಯಲ್ಲಿನ ಬೇರೆ ಅಭ್ಯರ್ಥಿಯನ್ನು ಪರಿಗಣಿಸಲಾಗುವುದು.

Q. ಅರ್ಜಿ ನಮೂನೆಯನ್ನು ವೆಬ್‌ಸೈಟ್ **www.udupi.nic.in** ನಲ್ಲಿ ಪಡೆದು ಅದನ್ನು ಮುದ್ರಿಸಿಕೊಂಡು ಅದರಲ್ಲಿ ಕೋರಿದ ಮಾಹಿತಿಯೊಂದಿಗೆ ಅರ್ಜಿ ಸಲ್ಲಿಸತಕ್ಕದ್ದು.

R. ಅರ್ಹ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ಪ್ರಾರಂಭವಾಗುವ ಬಗ್ಗೆ ಪ್ರಕಟಣೆಯನ್ನು ಪತ್ರಿಕೆಗಳಲ್ಲಿ/ ವೆಬ್‌ಸೈಟ್ **www.udupi.nic.in** ನಲ್ಲಿ ನೀಡಲಾಗುವುದು. ಹಾಗೂ ಸಂದರ್ಶನಕ್ಕೆ ಆಯ್ಕೆಯಾದ ಅಭ್ಯರ್ಥಿಗಳಿಗೆ RPAD ಅಂಚೆ ಮುಖಾಂತರ ತಿಳಿಸಲಾಗುವುದು.

S. 7 ನೇ ತರಗತಿಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆಯೇ ಅಭ್ಯರ್ಥಿಗಳ ಪಟ್ಟಿಯನ್ನು ಮಾನದಂಡವಾಗಿ ಪರಿಗಣಿಸಬೇಕಾಗಿರುವುದರಿಂದ ಆಯ್ಕೆಗೊಂಡ ಅಭ್ಯರ್ಥಿಗಳ 7 ನೇ ತರಗತಿಯ ಅಂಕಪಟ್ಟಿಯನ್ನು ಪರಿಶೀಲನೆಗೆ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಕಳುಹಿಸಿ ದೃಢೀಕರಣ ಪಡೆಯಲಾಗುವುದು.

T. ಅಭ್ಯರ್ಥಿಗಳನ್ನು ನೇಮಕಾತಿ ಮಾಡುವ ಪೂರ್ವದಲ್ಲಿ ಪೋಲೀಸ್ ಪರಿಶೀಲನಾ ವರದಿಯನ್ನು ಮತ್ತು ಸಿಂಧುತ್ವ ಪ್ರಮಾಣ ಪತ್ರವನ್ನು ಪಡೆದು ನೇಮಕಾತಿ ಆದೇಶ ನೀಡಲಾಗುವುದು.

U. ಅರ್ಜಿಗಳನ್ನು ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಸ್ ಕಛೇರಿ, ಅಬಕಾರಿ ಭವನ, 1 ನೇ ಮಹಡಿ, ಅಜ್ಜರಕಾಡು, ಉಡುಪಿ ಜಿಲ್ಲೆ, ಉಡುಪಿ ಈ ವಿಳಾಸಕ್ಕೆ **ದಿ:24-02-2015** ರೊಳಗೆ ಸಲ್ಲಿಸತಕ್ಕದ್ದು.

V. ಅರ್ಜಿಯ ಲಕೋಟೆ ಮೇಲೆ "ಚಾಲಕರ ನೇಮಕಾತಿ ಅರ್ಜಿ" ಎಂದು ದಪ್ಪ ಅಕ್ಷರಗಳಲ್ಲಿ ತಪ್ಪದೇ ನಮೂದಿಸುವುದು.

R. [signature] 24/01/15

ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ, ಉಡುಪಿ
ಹಾಗೂ ವಾಹನ ಚಾಲಕರ ನೇಮಕಾತಿ
ಸಮಿತಿಯ ಅಧ್ಯಕ್ಷರು

ಪ್ರತಿಗಳನ್ನು :-

1) ಜಿಲ್ಲೆಯ ಎಲ್ಲಾ ವಲಯಗಳ ಅಬಕಾರಿ ನಿರೀಕ್ಷಕರುಗಳಿಗೆ ಮಾಹಿತಿ ಹಾಗೂ ಪ್ರಚಾರಕ್ಕಾಗಿ.
2) ಜಿಲ್ಲೆಯ ಎಲ್ಲಾ ಉಪ ವಿಭಾಗಗಳ ಉಪ ಅಧೀಕ್ಷಕರುಗಳಿಗೆ ಮಾಹಿತಿ ಹಾಗೂ ಪ್ರಚಾರಕ್ಕಾಗಿ.
3) ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ಉಡುಪಿ ಜಿಲ್ಲೆ, ಉಡುಪಿ ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
4) ಅಬಕಾರಿ ಜಂಟಿ ಆಯುಕ್ತರು, (ಜಾರಿ. ಮತ್ತು ತನಿಖೆ) ಮಂಗಳೂರು ವಿಭಾಗ, ಮಂಗಳೂರುರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
5) ಅಬಕಾರಿ ಆಯುಕ್ತರು, ಕರ್ನಾಟಕ ರಾಜ್ಯ, ಬೆಂಗಳೂರುರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
6) ಜಿಲ್ಲಾ ಉದ್ಯೋಗಾಧಿಕಾರಿಗಳು, ಉಡುಪಿ ಜಿಲ್ಲೆ, ಉಡುಪಿರವರ ಮಾಹಿತಿಗಾಗಿ ಹಾಗೂ ಜಾಹೀರಾತಿನ ಪ್ರತಿಯನ್ನು ಸೂಚನಾ ಫಲಕದ ಮೇಲೆ ಪ್ರಕಟಿಸಲು ಮತ್ತು ತಮ್ಮಿಂದ ನೋಂದಾಯಿಸಲ್ಪಟ್ಟಿರುವ ಅರ್ಹ ಅಭ್ಯರ್ಥಿಗಳಿಗೆ ಜಾಹೀರಾತಿನಂತೆ ಕೊನೆಯ ದಿನಾಂಕದೊಳಗೆ ಅರ್ಜಿಯನ್ನು ಸಲ್ಲಿಸಲು ತಮ್ಮಿಂದ ನೇರವಾಗಿ ತಿಳುವಳಿಕೆ ನೀಡಲು ಕೋರಲಾಗಿದೆ.

# ಉಡುಪಿ ಜಿಲ್ಲಾ ಅಬಕಾರಿ ಇಲಾಖೆಯ ವಾಹನ ಚಾಲಕ (ಗ್ರೂಪ್–'ಸಿ') ಹುದ್ದೆಯ ನೇಮಕಾತಿಗಾಗಿ ಅರ್ಜಿ

(ನೋಟಿಫಿಕೇಶನ್ ಸಂ: ಯುಡಿಪಿ/ಇಎಕ್ಸ್‌ಇ/ಇಎಸ್‌ಟಿ/ಎಪಿಟಿ/ವಾಚಾ/58/2014–15 ದಿನಾಂಕ: 24–01–2015)

ಇವರಿಗೆ,

ಮಾನ್ಯ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಸ್,
ಅಬಕಾರಿ ಭವನ, 1 ನೇ ಮಹಡಿ,
ಅಜ್ಜರಕಾಡು, ಉಡುಪಿ ಜಿಲ್ಲೆ, ಉಡುಪಿ

ಪಾಸ್‌ಪೋರ್ಟ್ ಸೈಜಿನ ಭಾವಚಿತ್ರ ಲಗತ್ತಿಸಬೇಕು

ಮಾನ್ಯರೆ,

ವಿಷಯ :- ವಾಹನ ಚಾಲಕರ ಹುದ್ದೆಯ ನೇಮಕಾತಿಗಾಗಿ ಅರ್ಜಿ ಸಲ್ಲಿಸುವ ಕುರಿತು.

| | | | |
|---|---|---|---|
| 1. | ಅರ್ಜಿದಾರರ ಪೂರ್ಣ ಹೆಸರು (ದಪ್ಪ ಅಕ್ಷರಗಳಲ್ಲಿ) | : | |
| 2. | ಪೂರ್ಣ ವಿಳಾಸ | : | |
| | ಪೋಸ್ಟ್ | : | |
| | ತಾಲ್ಲೂಕು | : | |
| | ಜಿಲ್ಲೆ | : | |
| | ಪಿನ್ ಕೋಡ್ | : | |
| 3. | ದೂರವಾಣಿ/ ಮೊಬೈಲ್ ಸಂ. | : | |
| 4. | ಉದ್ಯೋಗ ವಿನಿಮಯ ಕಛೇರಿ ನೋಂದಣಿ ಸಂಖ್ಯೆ (ಇದ್ದಲ್ಲಿ ಪ್ರತಿ ಲಗತ್ತಿಸುವುದು) | : | |
| 5. | ಇಲಾಖಾ ಅಭ್ಯರ್ಥಿಯೇ? | : | |
| 6. | ವಿದ್ಯಾರ್ಹತೆ (7 ನೇ ತರಗತಿ ತೇರ್ಗಡೆ ಹೊಂದಿದ ಪ್ರಮಾಣ ಪತ್ರವನ್ನು ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಲಗತ್ತೀಕರಿಸತಕ್ಕದ್ದು) | : | |
| 7. | ಮೀಸಲಾತಿ ವರ್ಗ | : | ಸಾಮಾನ್ಯ ವರ್ಗ/ಪರಿಶಿಷ್ಟ ಪಂಗಡ/ಪ್ರವರ್ಗ–1 |
| 8. | ಮಹಿಳಾ ಅಭ್ಯರ್ಥಿಯೇ? | : | ಹೌದು / ಇಲ್ಲ |
| 9. | ಜನ್ಮ ದಿನಾಂಕ | : | |
| | ವಯಸ್ಸು | : | |
| | ಜನ್ಮ ಸ್ಥಳ : ____________ ತಾಲೂಕು ____________ ಜಿಲ್ಲೆ: ____________. | | |
| | (ಎಸ್.ಎಸ್.ಎಲ್.ಸಿ ಪ್ರಮಾಣ ಪತ್ರದಲ್ಲಿನ ಅಥವಾ ವರ್ಗಾವಣೆ ಪ್ರಮಾಣ ಪತ್ರ (T.C.) ಕ್ಯುಮುಲೇಟಿವ್ ರೆಕಾರ್ಡ್‌ನಲ್ಲಿ ನಮೂದಿಸಿರುವ ಜನ್ಮ ದಿನಾಂಕವನ್ನು ಮಾತ್ರ ಪರಿಗಣಿಸಲಾಗುವುದು. ಇತರೆ ಯಾವುದೇ ದಾಖಲೆಗಳನ್ನು ಪರಿಗಣಿಸಲಾಗುವುದಿಲ್ಲ. ಜನ್ಮ ದಿನಾಂಕವನ್ನು ಸಾಬೀತುಪಡಿಸುವ ಮೇಲ್ಕಾಣಿಸಿದ ಒಂದು ದಾಖಲಾತಿಯ ಪ್ರತಿಯನ್ನು ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಲಗತ್ತೀಕರಿಸತಕ್ಕದ್ದು) | | |
| 10. | ಜಾತಿ / ಉಪ ಜಾತಿ / ಪ್ರವರ್ಗ (ಜಾತಿ ಪ್ರಮಾಣ ಪತ್ರದ ಪ್ರತಿಯನ್ನು ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಲಗತ್ತೀಕರಿಸತಕ್ಕದ್ದು) | : | |

| | | | |
|---|---|---|---|
| **11.** | ಪ್ರಥಮ ಚಿಕಿತ್ಸೆಯ ಪ್ರಮಾಣ ಪತ್ರ. (First Aid Certificate) (ಪ್ರತಿಯನ್ನು ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಲಗತ್ತೀಕರಿಸತಕ್ಕದ್ದು) | : | |
| **12.** | ಚಾಲ್ತಿಯಲ್ಲಿರುವ 4 ಚಕ್ರ ಮೋಟಾರ್ ವಾಹನದ ಪರವಾನಿಗೆ ಪತ್ರ. **(LMV Driving Licence)** (4 ಚಕ್ರ ಮೋಟಾರ್ ವಾಹನದ ಪರವಾನಿಗೆ ಪತ್ರದ ಪ್ರತಿಯನ್ನು ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಲಗತ್ತೀಕರಿಸತಕ್ಕದ್ದು) | : | |
| **13.** | ಚಾಲ್ತಿಯಲ್ಲಿರುವ ಘನ ವಾಹನ ಚಾಲನೆ ಪರವಾನಿಗೆ ಪತ್ರ **(HMV).** (ಘನ ವಾಹನದ ಪರವಾನಿಗೆ ಪತ್ರದ ಪ್ರತಿಯನ್ನು ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಲಗತ್ತೀಕರಿಸತಕ್ಕದ್ದು) | : | |
| **14.** | ದೈಹಿಕ **Fitness/Standards** ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರ. (ಇದನ್ನು ಅಸಿಸ್ಟೆಂಟ್ ಸರ್ಜನ್ (ಗ್ರೇಡ್ ನಂ–1) ಇದಕ್ಕಿಂತ ಕಡಿಮೆ ದರ್ಜೆಯ ಅಧಿಕಾರಿಗಳು ನೀಡಿರಬಾರದು. ಮೂಲ ಪ್ರತಿ ಲಗತ್ತಿಕರಿಸತಕ್ಕದ್ದು) | : | |
| **15.** | ಸ್ಥಳೀಯ ಇಬ್ಬರು ಗಣ್ಯರಿಂದ ಪಡೆದ ಮೂಲ ನಡತೆ ಪ್ರಮಾಣ ಪತ್ರಗಳು. **(Conduct Certificate)** | : | |
| **16.** | ಸಾಮಾನ್ಯ ವರ್ಗದ ಅಭ್ಯರ್ಥಿಗಳು ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಸ್, ಉಡುಪಿ ಜಿಲ್ಲೆ, ಉಡುಪಿ ಇವರ ಹೆಸರಿನಲ್ಲಿ ಪಾವತಿಸಬೇಕಾದ ರೂ.5/– ರ ಅರ್ಜಿ ಶುಲ್ಕ ಪೋಸ್ಟಲ್ ಆರ್ಡರ್ ಸಂಖ್ಯೆ ಮತ್ತು ದಿನಾಂಕ ಪೋಸ್ಟಲ್ ಆರ್ಡರ್‌ನ್ನು ಲಗತ್ತೀಕರಿಸತಕ್ಕದ್ದು. | : | |
| **17.** | ಇತರೆ ವಿವರಗಳು/ಸಾಧನೆಗಳು **NCC, Scouts, Sports, Education, Extra Curricular Achievements** | : | |
| **18.** | ಲಗತ್ತಿಸಿದ ದಾಖಲಾತಿಗಳ ವಿವರ | : | |
| **19.** | ಮೇಲೆ ಸೂಚಿಸಲಾದ ಎಲ್ಲಾ ದಾಖಲಾತಿಗಳನ್ನು ಲಗತ್ತಿಸಿರುವಿರಾ? | : | ಹೌದು / ಇಲ್ಲ |

## ಘೋಷಣಾ ಪತ್ರ

ಶ್ರೀ/ಶ್ರೀಮತಿ/ಕುಮಾರಿ : ______________________________ ಆದ ನಾನು ಅರ್ಜಿ ಸಲ್ಲಿಸಿರುವ ಹುದ್ದೆಗೆ ಜಾಹೀರಾತಿನಲ್ಲಿ ನಿಗದಿಪಡಿಸಿರುವ ಎಲ್ಲಾ ಅರ್ಹತೆಯನ್ನು ಹೊಂದಿರುತ್ತೇನೆ. ಅರ್ಜಿಯನ್ನು ಭರ್ತಿ ಮಾಡದಿದ್ದಲ್ಲಿ ನನ್ನ ಅರ್ಜಿಯನ್ನು ತಿರಸ್ಕರಿಸಬಹುದು. ಅರ್ಜಿಯಲ್ಲಿ ನಮೂದಿಸಿರುವ ಎಲ್ಲಾ ವಿವರಗಳು ಸತ್ಯವಾಗಿದ್ದು, ಪರಿಪೂರ್ಣವಾಗಿದೆ. ವಿವರಗಳು ಸುಳ್ಳಾಗಿ ಕಂಡುಬಂದ ಪಕ್ಷದಲ್ಲಿ ನನ್ನನ್ನು ಯಾವಾಗಲಾದರೂ ಸೇವೆಯಿಂದ ಯಾವ ಮುನ್ಸೂಚನೆಯಿಲ್ಲದೇ ವಜಾ ಮಾಡುವುದರೊಂದಿಗೆ ಕ್ರಿಮಿನಲ್ ಮೊಕದ್ದಮೆಗೆ ಕ್ರಮ ಕೈಗೊಳ್ಳಲು ಇಲಾಖೆಗೆ ಅಧಿಕಾರವಿದೆಯೆಂದು ತಿಳಿದಿದ್ದೇನೆ ಹಾಗೂ ನಾನು ಈವರೆಗೆ ಯಾವುದೇ ಕಾನೂನು ಬಾಹಿರ ಬಹುಪತಿ/ಪತ್ನಿತ್ವ ಹೊಂದಿರುವುದಿಲ್ಲ. ಸರ್ಕಾರಿ/ ಸರ್ಕಾರಿ ಸ್ವಾಮ್ಯದ ಇಲಾಖೆಗಳ ಸೇವೆಯಿಂದ ವಜಾಗೊಂಡಿರುವುದಿಲ್ಲ ಹಾಗೂ ಕ್ರಿಮಿನಲ್ ಮೊಕದ್ದಮೆಗಳನ್ವಯ ಶಿಕ್ಷೆಗೆ ಒಳಪಟ್ಟಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ :

ದಿನಾಂಕ :

ಅಭ್ಯರ್ಥಿಯ ಸಹಿ: